# ಕರ್ನಾಟಕ ವಿಧಾನಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 541 |
| ಸದಸ್ಯರ ಹೆಸರು | : | ಶ್ರೀ.ಹೆಚ್.ರಮೇಶ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಕನ್ನಡ ಮತ್ತು ಸಂಸ್ಕೃತಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 11-12-2020 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಶೈಕ್ಷಣಿಕವಾಗಿ ಹಿಂದುಳಿದಿರುವ ತುಮಕೂರು ಜಿಲ್ಲೆಯ ಸುಮಾರು 846 ಅಂಗನವಾಡಿಗಳಿಗೆ ಸ್ವಂತ ಕಟ್ಟಡವಿಲ್ಲದಿರುವುದು ಹಾಗೂ ಬಹುತೇಕ ಅಂಗನವಾಡಿಗಳು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ಹೌದು. |
| ಆ. | ತುಮಕೂರು ಜಿಲ್ಲೆಯ ಸುಮಾರು 1.40 ಲಕ್ಷ ಗ್ರಾಮೀಣ ಪ್ರದೇಶದ ಮಕ್ಕಳು ಕಲಿಯುತ್ತಿರುವ ಅಂಗನವಾಡಿ ಕಟ್ಟಡಗಳಲ್ಲಿ ಶೌಚಾಲಯ, ಕುಡಿಯುವ ನೀರು ಮುಂತಾದ ಮೂಲಭೂತ ಸೌಕರ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ; | ಹೌದು. |
| ಇ. | ಬಂದಿದ್ದಲ್ಲಿ ಈ ಅಂಗನವಾಡಿಗಳ ಅಭಿವೃದ್ಧಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ನಿವೇಶನ ರಹಿತ ಅಂಗನವಾಡಿಗಳಿಗೆ ಶೀಘ್ರ ನಿವೇಶನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ಮಾಹಿತಿ ನೀಡುವುದು) | **ಅ).**ತುಮಕೂರು ಜಿಲ್ಲೆಯಲ್ಲಿ 846 ಅಂಗನವಾಡಿ ಕೇಂದ್ರಗಳಿಗೆ ಸ್ವಂತ/ಸರ್ಕಾರಿ ಕಟ್ಟಡಗಳಿರುವುದಿಲ್ಲ. ನಿವೇಶನ ಮತ್ತು ಅನುದಾನದ ಲಭ್ಯತೆ ಆಧಾರದ ಮೇಲೆ ಕಟ್ಟಡ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು.<br>18 ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದು, ಇವುಗಳನ್ನು ಶಾಲೆ/ಬಾಡಿಗೆ ಕಟ್ಟಡಗಳಿಗೆ ವರ್ಗಾಯಿಸಲಾಗಿದೆ.<br><br>**ಆ).** 134 ಅಂಗನವಾಡಿ ಕೇಂದ್ರಗಳಿಗೆ ಶೌಚಾಲಯ ನಿರ್ಮಾಣ ಮಾಡಲು ಇಲಾಖೆಯಿಂದ ರೂ.12000/- ದಂತೆ ಅನುದಾನ ಬಿಡುಗಡೆಯಾಗಿದ್ದು, ಉಳಿಕೆ ರೂ.28000/- ಗಳನ್ನು ಬಿಡುಗಡೆ ಮಾಡಲು ಸ್ವಚ್ಛ ಭಾರತ ಮಿಷನ್(ಗ್ರಾ) ಇವರನ್ನು ಕೋರಲಾಗಿದೆ. ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ 1512 ಕೇಂದ್ರಗಳಿಗೆ ನೀರಿನ ಸಂಪರ್ಕವನ್ನು ಕಲ್ಪಿಸಲು ಕ್ರಮ ವಹಿಸಲಾಗುತ್ತಿದೆ.<br><br>**ಇ).**ನಿವೇಶನ ಅಗತ್ಯವಿರುವ 577 ಕೇಂದ್ರಗಳಿಗೆ ನಿವೇಶನ ನೀಡುವಂತೆ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ ಎಲ್ಲಾ ತಾಲ್ಲೂಕು ತಹಶೀಲ್ದಾರ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಮುಖ್ಯಾಧಿಕಾರಿಗಳು ನಗರಸಭೆ/ಪುರಸಭೆಗಳಿಗೆ ಕೋರಲಾಗಿದ್ದು, ಈವರೆವಿಗೂ 28 ನಿವೇಶನಗಳನ್ನು ಪಡೆಯಲಾಗಿರುತ್ತದೆ. |

2/-

<table>
<tr>
<td>ಈ</td>
<td>ಪ್ರಸಕ್ತ ಸಾಲಿನಲ್ಲಿ ಮಹಿಳಾ ಕಲ್ಯಾಣ ಕಾರ್ಯಕ್ರಮಗಳು, ಮಕ್ಕಳ ಕಾರ್ಯಕ್ರಮಗಳು ಹಾಗೂ ಸಾಮಾಜಿಕ ರಕ್ಷಣಾ ಕಾರ್ಯಕ್ರಮಗಳಿಗೆ ಮೀಸಲಿಟ್ಟ ಹಣವೆಷ್ಟು; ಎಷ್ಟು ಹಣ ಬಳಕೆಯಾಗಿದೆ (ಸಂಪೂರ್ಣ ವಿವರ ನೀಡುವುದು)</td>
<td>
<table>
<tr><th>ಕ್ರ. ಸಂ</th><th>ಯೋಜನೆ</th><th>ಬಿಡುಗಡೆ(ರೂ.ಲಕ್ಷಗಳಲಿ)</th><th>ಖರ್ಚು(ರೂ. ಲಕ್ಷಗಳಲಿ)</th></tr>
<tr><td>1</td><td>ಸ್ತ್ರೀಶಕ್ತಿ (ಹೊ.ಗುಂ.ಸುತ್ತುನಿಧಿ)</td><td>0.95</td><td>0.95</td></tr>
<tr><td>2</td><td>ಡಿ.ವಿ.ಆಕ್ಟ್ (ಕಂ.ಆ.ಗೌ.ಧನ)</td><td>11.40</td><td>11.40</td></tr>
<tr><td>3</td><td>ಬಾಲ್ಯವಿವಾಹ ನಿಷೇಧ ಕಾಯ್ದೆ</td><td>0.00</td><td>0.00</td></tr>
<tr><td>4</td><td>ಪೋಷಣ್ ಅಭಿಯಾನ್</td><td>76.83</td><td>12.24</td></tr>
<tr><td>5</td><td>ಮಾತೃವಂದನ</td><td>20.04</td><td>20.04</td></tr>
<tr><td>6</td><td>ಪೂರಕ ಪೌಷ್ಟಿಕ ಆಹಾರ</td><td>4655.16</td><td>3326.88</td></tr>
</table>
</td>
</tr>
</table>

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತುವಿಕಲಚೇತನರ,
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ :ಮಮಇ 227 ಐಸಿಡಿ 2020